( DW - 2 )

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿಯರ ಪರ ಶ್ರೀ ಕೆ.ಪಿ.ಎಸ್ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷಿ ಪ್ರಮಾಣ ಪತ್ರದ ಮೂಲಕ ಹಾಜರುಪಡಿಸಿದ್ದು, ಅದರಲ್ಲಿ ಬರೆಸಿರುವ ಸಂಗತಿಗಳು ನಿಜವಿರುತ್ತದೆ. ನಾನು ಅದನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದು, ಅದರಲ್ಲಿ ಕಂಡು ಬರುವ ಸಹಿ ನನ್ನದೇ ಆಗಿರುತ್ತದೆ.

1ನೇ ಪ್ರತಿವಾದಿ ನನಗೆ ದಾವೆದ ಸ.ನಂ.139/2 ರಲ್ಲಿ 1 ಎಕರೆ 15 ಗುಂಟೆ 08 ಅಣೆ ಜಮೀನು ಮಾರಾಟ ಮಾಡಿದ ಖರೀದಿ ಪತ್ರ ಈಗ ನನಗೆ ತೋರಿಸಿದ ದಾಖಲೆ ಇದೆ, ಸಾಕ್ಷಿ ನಿಪಿ-4 ಖರೀದಿ ಪತ್ರದ ದೃಢೀಕೃತ ಪ್ರತಿ ನೋಡಿ ಗುರುತಿಸಿರುತ್ತಾರೆ. ನಿಡಿ-4 ಕ್ಕೆ 1ನೇ ಪ್ರತಿವಾದಿ ಖರೀದಿ ಕೊಟ್ಟ ಬಗ್ಗೆ ಸಹಿ ಮಾಡಿದ್ದು, 2 ರಿಂದ 4ನೇ ಪ್ರತಿವಾದಿಯರು ಒಪ್ಪಿ ಗೆ ಸಾಕ್ಷಿ ಅಂತ ಸಹಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರದ ಆಧಾರದ ಮೇಲೆ ನಾನು ಖರೀದಿ ತೆಗೆದುಕೊಂಡ ಆಸ್ತಿಗೆ ನನ್ನ ಹೆಸರು ಖಾತೆಯಾಗಿದ್ದು, ನಿಪಿ-1 ರ ಪ್ರಕಾರ ನನ್ನ ಹೆಸರು ಎಂಟ್ರಿಯಾಗಿ ನಾನು ಕಬ್ಜೆಯಲ್ಲಿದ್ದೇನೆ.

ಆದ್ದರಿಂದ ವಾದಿಯರ ದಾವೆ ವಜಾ ಮಾಡಬೇಕಾಗಿ ವಿನಂತಿ.

ಪಾಟೀ ಸವಾಲುಃ ವಕೀಲರ ವಿನಂತಿ ಮೇರೆಗೆ ಮುಂದೂಡಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/- 12.02.25

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.